# ಹೆರಿಗೆ ಕೋಣೆ ಕಟ್ಟಡಕ್ಕೆ ಭೂಮಿ ಪೂಜೆ



**ಯಲ್ಲಾಪುರ :** ಪಟ್ಟಣದ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ತಾಲೂಕು ಪಂಚಾಯತಿ ಅನುದಾನವೂ ಒಳಗೊಂಡಂತೆ ಸೆಲ್ಕೋ ಫೌಂಡೇಶನ್ (ರಿ). ಬೆಂಗಳೂರು ಇವರ ಸಹಭಾಗಿತ್ವದಲ್ಲಿ ಸೌರಶಕ್ತಿ ಆಧರಿತ ನೂತನ ಮಾದರಿಯ ಹೆರಿಗೆ ಕೋಣೆ ಕಟ್ಟಡದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿತು.

ಇತ್ತೀಚಿಗೆ ತಾಲೂಕು ಪಂಚಾಯತಿಯಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಅಧ್ಯಕ್ಷೆ ಚಂದ್ರಕಲಾ ಭಟ್ಟ ಹೇಳಿದಂತೆ ತಾಲೂಕು ಪಂಚಾಯತಿಯ 6 ಲಕ್ಷ ಹಣದೊಂದಿಗೆ ಸೆಲ್ಕೋ ಫೌಂಡೇಶನ್ ವತಿಯಿಂದ 25 ಲಕ್ಷಕ್ಕೂ ಅಧಿಕ ಹಣ ಬಳಸಿ ಜಿಲ್ಲೆಯಲ್ಲಿಯೇ ಸುಸಜ್ಜಿತ ಹೆರಿಗೆ ಕೋಣೆ ನಿರ್ಮಾಣವಾಗುತ್ತಿದ್ದು ಭೂಮಿ ಪೂಜೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ್ ನೆರವೇರಿಸಿದರು.

ಈ ಸಂದರ್ಭದಲ್ಲಿ ಸಾವಾಜಿಕ ಕಾರ್ಯಕರ್ತ ವಿಜಯ್ ಮಿರಾಶಿ, ತಾಲೂಕು ಪಂಚಾಯತಿ ಅಧ್ಯಕ್ಷೆ ಚಂದ್ರಕಲಾ ಭಟ್ಟ, ಉಪಾಧ್ಯಕ್ಷೆ ಸುಜಾತಾ ಸಿದ್ಧಿ, ಸದಸ್ಯ ನಾಗರಾಜ ಕವಡೀಕೆರೆ, ಜಿಲ್ಲಾ ಪಂಚಾಯತಿ ಸದಸ್ಯೆ ರೂಪಾ ಬೂರ್ಮನೆ, ತಾ.ಪಂ ಮುಖ್ಯಕಾರ್ಯನಿರ್ವಹಣಾಧಿಕಾರಿ ಜಗದೀಶ ಕಮ್ಮಾರ್, ಪ.ಪಂ ಸದಸ್ಯ ಸತೀಶ್ ನಾಯ್ಕ ಪ್ರಮುಖರಾದ ಗಣಪತಿ ಮುದ್ದೇಪಾಲ, ಮುರಳೀ ಹೆಗಡೆ, ತಾಲೂಕು ಆರೋಗ್ಯಾ ಧಿಕಾರಿ ಡಾ. ನರೇಂದ್ರ ಪವಾರ್, ತಾಲೂಕು ಆಸ್ಪತ್ರೆ ವೈದ್ಯಾಧಿಕಾರಿ ಡಾ. ರಾಮಾ ಹೆಗಡೆ, ಸೆಲ್ಕೋ ಫೌಂಡೇಶನ್ ಪ್ರಮುಖರು , ಸರ್ಕಾರಿ ಆಸ್ಪತ್ರೆಯ ಡಾ. ದೀಪಕ್, ಡಾ. ಸೌಮ್ಯಾ, ಡಾ.ಗೀತಾ, ಡಾ.ಕುರ್ತಕೋಟಿ, ಜಿ.ಎಂ ಭಟ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕರಾವಳಿ ಮುಂಜಾವು